## ಹೇಮಲತಾ ಮಹಿಷಿ

ಶಿವಮೊಗ್ಗದವರಾದ ಹೇಮಲತಾ ವಕೀಲೆ ಮತ್ತು ಲೇಖಕಿ. ಕನ್ನಡದ ಪತ್ರಿಕೆಗಳಲ್ಲಿ ಕಾನೂನು ಸಂಬಂಧಿ ಸಲಹೆ, ಮಾರ್ಗದರ್ಶನವನ್ನು ಕೊಡುವ ಅಂಕಣಗಳನ್ನು ದಶಕಗಳ ಕಾಲ ನಿರ್ವಹಿಸುತ್ತಾ ಬಂದಿದ್ದಾರೆ. ಅವರು ಪ್ರವಾಸ ಕಥನ, ಕತೆ, ಲಘುಬರಹ ಮತ್ತು ಕಾನೂನಿನ ತಿಳಿವಳಿಕೆ ನೀಡುವ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಪ್ರಜಾವಾಣಿ', 'ಸುಧಾ' ಸೇರಿದಂತೆ ಕನ್ನಡದ ಅನೇಕ ಪತ್ರಿಕೆಗಳಲ್ಲಿ ತಮ್ಮ ಬರಹಗಳನ್ನು ಪ್ರಕಟಿಸಿದ್ದಾರೆ. ಯುರೋಪ್ ಖಂಡದ ತಿರುಗಾಟದ ಕುರಿತು ಬರೆದ 'ಯುರೋ ದರ್ಶನ' ಮತ್ತು ಆಸ್ಟ್ರೇಲಿಯಾ ಸುತ್ತಾಟದ ಕುರಿತು ಇವರು ಬರೆದ 'ಕಾಂಗರೂ ಕಿವಿಯ ನಾಡಿನಲ್ಲಿ' ಎಂಬ ಪ್ರವಾಸ ಕಥನಗಳು, 'ಜಾಯಮಾನ', 'ತ್ರಿಶಂಕು' ಎಂಬ ಕಥಾ ಸಂಕಲನಗಳು ಸೇರಿದಂತೆ ಅವರ 16 ಪುಸ್ತಕಗಳು ಪ್ರಕಟಗೊಂಡಿವೆ.



ಕಣ್ಣುಗಳು ಆಗಾಗ್ಗೆ ಅವಳತ್ತ ಕೇಂದ್ರೀಕೃತವಾಗುತ್ತಿದ್ದವು. ಆದರೆ ಬೆಂಗಳೂರಿನಲ್ಲಿ ಅದು ಅಷ್ಟೇನು ರೊಮ್ಯಾಂಟಿಕ್ ಆಗಿ ಕಾಣುತ್ತಾ ಇರಲಿಲ್ಲ. ಈಗ ಈ ಬಸ್ಸಿನ ಪ್ರಯಾಣದಲ್ಲಿ ಅವನ ಆರಾಧನೆಯ ನೋಟ ಹಿತಕರವಾಗಿತ್ತು. ಬಹುಶಃ ಸನ್ನಿವೇಶದ ಪ್ರಭಾವವಿರಬೇಕು; ಸುತ್ತಲಿನ ಹಸಿರಿನ ಸಾಮ್ರಾಜ್ಯ. ಬಸ್ಸಿನಲ್ಲಿ ಇದ್ದವರೆಲ್ಲ ಕೊಳಕಾಗಿದ್ದ ಹಳ್ಳಿಗರೇ. ಅದರಲ್ಲಿ ಸ್ವಲ್ಪ ಟ್ರಿಮ್ ಆಗಿ ಬಟ್ಟೆ ಹಾಕಿಕೊಂಡು, ನಾಗರಿಕನಾಗಿ, ಆಕರ್ಷಕವಾಗಿ ಕಾಣುತ್ತಿದ್ದವನು ಅವನೊಬ್ಬನೇ. ಅದಕ್ಕೇ ಇರಬೇಕು ಈ ಸೆಳೆತ. ಇಲ್ಲವಾದರೆ ಬೆಂಗಳೂರಿನಲ್ಲಿ ಇಂತಹವರನ್ನು, ಇವನಪ್ಪನಂತಹವರನ್ನು ಎಷ್ಟು ಜನರನ್ನು ನೋಡಿಲ್ಲ.

ಚಪಲ ತಡೆಯಲಾರದೆ ಅವಳು ಬಲಗಡೆಯ ಕಿಟಕಿ ಮೂಲಕ ಹೊರಗೆ ನೋಡುವವಳಂತೆ ಕಣ್ಣು ಹೊರಳಿಸಿದಾಗ, ಅವಳ ದೃಷ್ಟಿ ಅವನ ದೃಷ್ಟಿಯನ್ನೆದುರಿಸಿತ್ತು. ಒಂದು ಸಾರಿ ಮೈ 'ಝುಂ' ಎಂದು ಹಿತವಾದ ಅನುಭವವಾಯಿತು. ಬೆಂಗಳೂರಿನಲ್ಲಿ ಯಾವಾಗಲೂ ಹೀಗೆ ಆದ ನೆನಪಿರಲಿಲ್ಲ. ಕಣ್ಣು ಹಸಿರಿನ ಕಡೆ ನೆಟ್ಟಿದ್ದರೂ ಮನಸ್ಸು ಆ ಅನುಭವವನ್ನು ಮೆಲುಕುಹಾಕುತ್ತಿತ್ತು.

ಇದ್ದಕ್ಕಿದ್ದಂತೆ ಬಸ್ಸಿಗೆ ಬ್ರೇಕ್ ಹಾಕಿದಾಗ ಸುಮತಿ ಮುಂದೆ ವಾಲಿದಳು. ಡ್ರೈವರ್ ರಸ್ತೆಯಲ್ಲಿ ಹಾವು ಅಡ್ಡ ಮಲಗಿದೆ ಎಂದಾಗ ಕೆಲವರು ಕುತೂಹಲದಿಂದ ತಮ್ಮ ತಮ್ಮ ಸ್ಥಳ ಬಿಟ್ಟು ಬಸ್ಸಿನ ಮುಂದಿನ ಗಾಜಿನ ಮೂಲಕ ಇಣುಕಿದರು. ಅಷ್ಟರಲ್ಲಿ ಹಾವು ಸರಸರನೆ ಹರಿದು ಎಡಪಕ್ಕಕ್ಕೆ ಹೊರಟುಹೋಯಿತು. ಅದು ಹುಲ್ಲನ್ನು ಸೇರಿ ಮರೆಯಾಗುವುದರೊಳಗೆ ಬಿಸಿಲು ಬಿದ್ದು ಫಳ